## ಪುತ್ತೂರು ಗೇರು ದಿನೋತ್ಸವದಲ್ಲಿ ಕೇರಳ ಸಚಿವೆ ಮರ್ಸಿಕುಟ್ಟಿ

# ಗೇರು ರಫ್ತಿಗೆ ಆದ್ಯತೆ ನೀಡಲು ಸಕಾಲ




■ **ವಿಕ ಸುದ್ದಿಲೋಕ** ಪುತ್ತೂರು

ಗೇರು ಕೃಷಿ ಭಾರತದ ಆರ್ಥಿಕತೆಗೆ ಹೆಚ್ಚಿನ ಕೊಡುಗೆ ನೀಡುತ್ತಿದ್ದು, ಇದರ ರಫ್ತು ಪ್ರಮಾಣ ಹೆಚ್ಚಿಸಲು ಇನ್ನಷ್ಟು ಕ್ರಮಗಳನ್ನು ಕೈಗೊಳ್ಳುವ ಆಗತ್ಯವಿದೆ ಎಂದು ಕೇರಳ ರಾಜ್ಯ ಮೀನುಗಾರಿಕೆ, ಬಂದರು ಹಾಗೂ ಗೇರು ಉದ್ಯಮದ ಸಚಿವೆ ಮರ್ಸಿಕುಟ್ಟಿ ಅಮ್ಮ ಹೇಳಿದರು.

ಪುತ್ತೂರಿನ ಕೆಮ್ಮಿಂಜೆಯ ಮೊಟ್ಟೆತ್ತಡ್ಕದಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಮಂಗಳವಾರ ನಡೆದ ಗೇರು ದಿನೋತ್ಸವದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಜಾಗತಿಕ ಮಾರುಕಟ್ಟೆಯಲ್ಲಿ ಗೋಡಂಬಿಗೆ ಉತ್ತಮ ಬೇಡಿಕೆ ಇದೆ. ಹೀಗಾಗಿ ಗೇರು ಕೃಷಿಯಲ್ಲಿ ಎಷ್ಟು ಬೇಕಾದರೂ ಸಾಧನೆ ಮಾಡಬಹುದು. ಇದಕ್ಕೆ ಉತ್ತಮ ಮಾರುಕಟ್ಟೆ ಇರುವ ಕಾರಣ ರೈತರಿಗೆ ಉತ್ತಮ ಬದುಕು ಕೊಡಬಲ್ಲದು. ಭಾರತದಲ್ಲಿ ಗೇರು ಕೃಷಿ ಪ್ರಮುಖ ಉದ್ಯಮವಾಗಿ ಬೆಳೆದಿದ್ದು, ರೈತರ ಆಧಾಯ ದ್ವಿಗುಣಗೊಳಿಸಲು ಸಹಕಾರಿಯಾಗಿದೆ ಎಂದವರು ನುಡಿದರು.

ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ರೈತರು ತಮ್ಮ ತೋಟಗಳಲ್ಲಿ ಅಳವಡಿಸಿದಲ್ಲಿ ಉತ್ತಮ ಇಳುವರಿ ಪಡೆಯಲು ಸಾಧ್ಯವೆಂದು ಹೇಳಿದ ಅವರು, ಗೇರು ದಿನೋತ್ಸವ ಸಾರ್ಥಕಗೊಳಿಸಲು ರೈತರು ಗಮನ ಹರಿಸಬೇಕು ಎಂದರು.

ಕೇರಳ ರಾಜ್ಯ ಗೇರು ಉತ್ತೇಜನ ಮಂಡಳಿಯ ಅಧ್ಯಕ್ಷ ಶಿರಿಶ್ ಕುಮಾರ್ ಮಾತನಾಡಿ, ಪುತ್ತೂರು ನಿರ್ದೇಶನಾಲಯದಲ್ಲಿ ಅಭಿವೃದ್ಧಿಪಡಿಸಿದ ವಿವಿಧ ತಳಿಗಳು ಮತ್ತು ತಂತ್ರಜ್ಞಾನಗಳು ಭಾರತದ ಗೇರು ಕೃಷಿಯ ಉತ್ತೇಜನಕ್ಕೆ ಸಹಕಾರಿ ಎಂದರು.



ಕೇರಳ ಸಚಿವೆ ಮರ್ಸಿಕುಟ್ಟಿ ಅಮ್ಮ ಅವರು ಮೊಟ್ಟೆತ್ತಡ್ಕದಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಗೇರು ನರ್ಸರಿಯನ್ನು ವೀಕ್ಷಿಸಿದರು.

ಕಾಸರಗೋಡು ಸಿಪಿಸಿಆರ್‌ಐ ಪ್ರಭಾರ ನಿರ್ದೇಶಕರಾದ ಡಾ. ಅನಿತಾ ಕರುಣ್ ತೋಟಗಾರಿಕಾ ಬೆಳೆಗಳ ಮಹತ್ವದ ಬಗ್ಗೆ ಮಾತನಾಡಿದರು.

ಸಂಸ್ಥೆಯ ನಿರ್ದೇಶಕರಾದ ಡಾ.ಯಂ.ಜಿ. ನಾಯಕ್ ಸಂಸ್ಥೆಯು ಅಭಿವೃದ್ಧಿ ಪಡಿಸಿದ ವಿವಿಧ ಗೇರು ತಳಿಗಳ ಬಗ್ಗೆ ಮಾಹಿತಿ ನೀಡಿದರು. ಸಂಸ್ಥೆಯು ಹೊರತಂದ ಜಾಲತಾಣ ಹಾಗೂ ಗೇರು ಕೃಷಿ ಕುರಿತ ಎರಡು ಗ್ರಂಥ ಮಾಲಿಕೆಗಳನ್ನು ಬಿಡುಗಡೆಗೊಳಿಸಲಾಯಿತು. ಸಂವಾದ ಕಾರ್ಯಕ್ರಮದಲ್ಲಿ ರೈತರು ಗೇರು ಕೃಷಿಯ ಕುರಿತ ಅಭಿಪ್ರಾಯಗಳನ್ನು ಹಂಚಿಕೊಂಡರು. 200 ಗೇರು ಕೃಷಿಕರು ಭಾಗವಹಿಸಿದ್ದರು.

ಹಿರಿಯ ವಿಜ್ಞಾನಿ ಡಾ.ಜೆ. ದಿನಕರ್ ಅಡಿಗ ವಂದಿಸಿದರು. ಪ್ರಕಾಶ್ ಜಿ.ಭಟ್. ಕಾರ್ಯಕ್ರಮ ನಿರೂಪಿಸಿದರು.

ವಿಜಯ ಕರ್ನಾಟಕ 23/01/2019